ಕರ್ನಾಟಕಅರಣ್ಯ ಇಲಾಖೆ

## ಮುಖ್ಯಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರ, ಮಂಗಳೂರು ವೃತ್ತ, ಮಂಗಳೂರು

## ಪ್ರಕಟಣೆ

ಅಧಿಸೂಚನೆ ಸಂಖ್ಯೆ:ಎ4/ಸಿಬ್ಬಂದಿ/ಅ.ವೀ.ನೇ.ನೇ/ವಿವ.106/2017-18, ದಿನಾಂಕ: 05-12-2022

### ಅರಣ್ಯ ವೀಕ್ಷಕ (ಬ್ಯಾಕ್‌ಲಾಗ್) ಹುದ್ದೆಗಳ ನೇರ ನೇಮಕಾತಿ ಕುರಿತು

********

ಅರಣ್ಯ ವೀಕ್ಷಕ (ಬ್ಯಾಕ್‌ಲಾಗ್) ಹುದ್ದೆಗಳ ನೇರ ನೇಮಕಾತಿ ಕುರಿತಂತೆ ದಿನಾಂಕ: 16-02-2020 ರಂದು ಲಿಖಿತ ಪರೀಕ್ಷೆ ನಡೆದಿರುತ್ತದೆ. ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಈಗಾಗಲೇ ಪ್ರಕಟಿಸಲಾಗಿದೆ. ನೇರ ಮತ್ತು ಸಮತಲ ಮೀಸಲಾತಿ ನಿಯಮಗಳ ಅನುಸಾರ ಹಾಗೂ ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಅಧಿಸೂಚನೆಯಲ್ಲಿ ವಿಧಿಸಿರುವ ಷರತ್ತುಗಳ ಆಧಾರದ ಮೇರೆಗೆ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಕಾಯುವಿಕೆ ಪಟ್ಟಿಯನ್ನು ದಿನಾಂಕ:19-03-2020ರಂದು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುತ್ತದೆ.

ಈ ತಾತ್ಕಾಲಿಕ ಕಾಯುವಿಕೆ ಪಟ್ಟಿಯಲ್ಲಿರುವ ಸದರಿಅಭ್ಯರ್ಥಿಗೆ ಶೈಕ್ಷಣಿಕ ವಿದ್ಯಾರ್ಹತೆ, ಮೀಸಲಾತಿ, ಇತರೆ ಎಲ್ಲಾ ಮೂಲ ದಾಖಲಾತಿಗಳ ಕುರಿತು ಪರಿಶೀಲನೆ ಹಾಗೂ ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಲು ಮತ್ತು ನಿಗಧಿತ ವೈದ್ಯಕೀಯ ಅರ್ಹತಾ ಪರೀಕ್ಷೆಗೆ ದಿನಾಂಕ: 08.12.2022 ರಂದು ಪೂರ್ವಾಹ್ನ 10.30 ಗಂಟೆಗೆ ಈ ಕೆಳ ಸಹಿದಾರ ಸಮ್ಮುಖ ಹಾಜರಾಗಲು ತಿಳಿಸಿದೆ.

ಅಭ್ಯರ್ಥಿಯು ದಿನಾಂಕ: 08.12.2022ರಂದು ಮೂಲ ದಾಖಲಾತಿ ಹಾಗೂ ವೈದ್ಯಕೀಯ ಪರೀಕ್ಷೆಗೆ ಖುದ್ದಾಗಿ ಹಾಜರಾಗುವ ಸಂದರ್ಭದಲ್ಲಿ ಎಲ್ಲಾ ಮೂಲ ದಾಖಲಾತಿಗಳೊಂದಿಗೆ, ಅವುಗಳ ಹೆಚ್ಚುವರಿ ದೃಢೀಕೃತ ಪ್ರತಿಯೊಂದಿಗೆ ಹಾಗೂ ಇತ್ತೀಚಿಗಿನ ಮೂರು ಭಾವಚಿತ್ರದೊಂದಿಗೆ ಹಾಜರಾಗತಕ್ಕದ್ದು. ಈ ಬಗ್ಗೆ ಅಭ್ಯರ್ಥಿಯು ಎಲ್ಲಾ ಪೂರ್ವಸಿದ್ದತೆಯನ್ನು ಮಾಡಿಕೊಳ್ಳಲು ತಿಳಿಸಿದೆ.

ಈ ಮಾಹಿತಿಯನ್ನು ಅರಣ್ಯ ಇಲಾಖೆಯ ವೆಬ್‌ಸೈಟ್ www.aranya.gov.in ನಲ್ಲಿ ಪ್ರಕಟಿಸಲಾಗಿದೆ.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಮತ್ತು ಆಯ್ಕೆ ಪ್ರಾಧಿಕಾರ
ಮಂಗಳೂರು ವೃತ್ತ, ಮಂಗಳೂರು

ದಿನಾಂಕ: 05.12.2022
ಸ್ಥಳ: ಮಂಗಳೂರು